ಪ್ರಮಾಣೀಕರಿಸಲಾದ ದಿನಾಂಕ: **25.10.2025.**

<u>ಪಾಟೀ ಸವಾಲು ವಾದಿ ಪರ ಶ್ರೀ. ಎಸ್.ವಿ.ಎಸ್ ವಕೀಲರಿಂದ:</u>

ವಾದಿ ಪರಿಚಯ. ನಮ್ಮ ಪಕ್ಕದ ತೋಟ ವಾದಿಯವರದ್ದು. ವಾದಿಯ ಜಮೀನಿನ ಸರ್ವೆ ನಂಬರ್ ಗೊತ್ತಿಲ್ಲ. ವಾದಿ ಯಾರಿಂದ ಖರೀಸಿದರು ಗೊತ್ತಿಲ್ಲ. ತಿತೀರ ಕುಟುಂಬದ ಮುದ್ದಯ್ಯ ಗೊತ್ತು. ನಾನು ತಿತೀರ ಕುಟುಂಬದವನೇ. ದಾವಾ ಸರ್ವೆ ನಂಬರ್ ಆಸ್ತಿಯಲ್ಲಿ ನಮ್ಮಗಳ ನಡುವೆ ವಿಭಾಗವಾಗಿದೆ. ಮುದ್ದಯ್ಯನವರಿಗೆ ಒಂದು ಭಾಗ ಬಂದಿದ್ದು ಈಗಿನ ಸರ್ವೆ ನಂಬರ್ ಗೊತ್ತಿಲ್ಲ. ಮೂಲ ಸರ್ವೆ ನಂ. 12/1 ಎಂದರೆ ಸರಿ. ನನ್ನ ತಂದೆ ತಿತೀರ ಕುಟುಂಬದ ಪಟ್ಟೇದಾರ್. ವಿಭಾಗವಾಗದೇ ಇರುವ ಜಮೀನಿನ ಹೆಸರು ಪಟ್ಟೇದಾರ್‌ರವರ ಹೆಸರಿನಲ್ಲಿ ಮುಂದುವರೆದಿರುತ್ತದೆ ಎಂದರೆ ಸರಿ. ವಿಭಾಗ ಮಾಡಿಕೊಂಡಿದ್ದು ವಿಭಾಗದಂತೆ ಖಾತೆ ಮಾಡಿಸಿಕೊಳ್ಳದೇ ಇದ್ದರೆ ಪಟ್ಟೇದಾರ್ ಹೆಸರಿನಲ್ಲೇ ಆರ್ ಟಿ ಸಿ ಮುಂದುವರೆಯುತ್ತದೆ ಎಂದರೆ ಸರಿ. ದಾವಾಸ್ತಿ ತಿತೀರ ಮುದ್ದಯ್ಯನವರ ಪಾಲಿಗೆ ಹೋಗಿರುತ್ತದೆ ಎಂದರೆ ಸರಿ. ನನ್ನ ತಂದೆ ಪಟ್ಟೇದಾರ್ ಆದ್ದರಿಂದ ಈ ದಾವಾಸ್ತಿ ಅವರ ಹೆಸರಿನಲ್ಲಿ ಮುಂದುವರೆದಿತ್ತು.

ವಾದಿ ಖರೀದಿಸಿದ ನಂತರ ಖಾತೆ ಬದಲಾವಣೆಗೆ ಅರ್ಜಿ ಕೊಟ್ಟ ವಿಚಾರ ನನಗೆ ಗೊತ್ತಿಲ್ಲ. ವಾದಿಯು ಈ ಆಸ್ತಿಯನ್ನು ಖರೀದಿಸುವಾಗಲು ನಮ್ಮ ತಂದೆಯನ್ನು ಕೇಳಿರುವುದಿಲ್ಲ, ಅದೇ ರೀತಿ ಖಾತೆಯ ಅರ್ಜಿ ಕೊಡುವುದು ನಮಗೆ ಗೊತ್ತಿಲ್ಲ. ನನ್ನ ತಂದೆ ಖಾತೆ ಬದಲಾವಣೆಗೆ ತಕರಾರು ಹಾಕಿದ್ದು ಅದರಲ್ಲಿ ಈಗಿನ ದಾವಾಸ್ತಿಯ ಸರ್ವೆ ನಂ 12/6 ಎಂದು ಹೇಳಿರುತ್ತಾರೆ. ಹಿರಿಯ ಶ್ರೇಣಿ ವಿರಾಜಪೇಟೆ ನ್ಯಾಯಾಲಯದಲ್ಲಿ O.S. 64/2000 ದಾವೆಯನ್ನು ನಮ್ಮ ಕುಟುಂಬದವರು ವಿಭಾಗಕೋರಿ ಹಾಕಿದ್ದರು ಎಂದರೆ ಸರಿ. ನನ್ನ ತಂದೆ ಆ ದಾವೆಯಲ್ಲಿ ದಾವಾಸ್ತಿಯ ಈಗಿನ ಸರ್ವೆ ನಂ 12/6 ಎಂದು ಹೇಳಿರುವ ಬಗ್ಗೆ ನನಗೆ ಗೊತ್ತಿಲ್ಲ, ಮುಂದುವರೆದು ದಾವಾಸ್ತಿ ಸರ್ವೆ ನಂ 12/1 ಬೇರೆ ಆಸ್ತಿ ಮತ್ತು ಸರ್ವೆ ನಂ 12/6 ಬೇರೆ ಆಸ್ತಿ ಆಗಿರುತ್ತದೆ. ಸರ್ವೆ ನಂ 12/1 ರಲ್ಲಿ ಒಟ್ಟು ವಿಸ್ತೀರ್ಣ 35 ಎಕರೆ 35 ಸೆಂಟ್ ಇತ್ತು. ಸರ್ವೆ ನಂ 12/1 ರಲ್ಲಿಯೇ ಸರ್ವೆ ನಂ 12/6 ವಿಂಗಡಿಸಲಾಗಿದೆ ಎಂದರೆ ಸರಿ. ವಿಭಾಗದಲ್ಲಿ ನನ್ನ ತಂದೆಗೆ ಸರ್ವೆ ನಂ 12/1 ರಲ್ಲಿ ಎಷ್ಟು ಆಸ್ತಿ ಬಂದಿದೆ ಎಂದು ದಾಖಲೆ ಕೊಟ್ಟಿರುತ್ತೇನೆ.

ಕಂದಾಯ ರಶೀದಿ ಮತ್ತು ಆರ್ ಟಿ ಸಿ ಗಳು ನನ್ನ ತಂದೆಗೆ ಬಂದಂತಹ ಆಸ್ತಿಗಳು ಎಂದು ತೋರಿಸಲು ದಾಖಲೆ ಕೊಟ್ಟಿದ್ದೇನೆ. ನನ್ನ ತಂದೆ ಪಟ್ಟೇದಾರ್ ಆದ ಕಾರಣಕ್ಕೆ ಹಂಚಿಕೆ ಆಗದ ಆಸ್ತಿಗಳಲ್ಲೂ ಅವರ ಹೆಸರು ಇತ್ತು ಎಂದರೆ ಸರಿ. ವಿಭಾಗ ಮಾಡಿಕೊಳ್ಳುವಾಗ ಎಲ್ಲ ಕುಟುಂಬಸ್ಥರ ಒಪ್ಪಿ ಗೆ ಪಡೆದಿರುವ ಬಗ್ಗೆ ದಾಖಲೆ ಕೊಟ್ಟಿದ್ದೇನೆ. ನಾನು ಬಿ. ಎ. ಓದಿದ್ದೇನೆ. ನನ್ನ ತಂದೆ ಅವರು ಕೊಟ್ಟ ಮಾಹಿತಿ ಮೇರೆಗೆ ಲಿಖಿತ ಹೇಳಿಕೆ ಸಲ್ಲಿಸಲಾಗಿದೆ. English ಭಾಷೆ ನನಗೆ ಬರುತದೆ. ನನ್ನ ತಂದೆ ಮತ್ತು ವಕೀಲರು ಹೇಳಿದಂತೆ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಮಾಹಿತಿ ಸಲ್ಲಿಸಲಾಗಿದೆ.. ನನ್ನ ತಂದೆಯಿಂದ ಈ ದಾವೆಯ ವಿಚಾರಗಳನ್ನು ತಿಳಿದುಕೊಂಡಿರುತ್ತೇನೆ. ನನ್ನ ತಂದೆ ಪಟ್ಟೇದಾರ್ ಆಗಿದ್ದು ಅದನ್ನು ದುರುಪಯೋಗಪಡಿಸಿಕೊಂಡು ವಿಭಾಗದಲ್ಲಿ ಬಂದಂತಹ ಆಸ್ತಿಗಳಿಗಿಂತ ಹೆಚ್ಚಾಗಿ ಆರ್ ಟಿ ಸಿ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ.

<u>ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

**sd/-**
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಪೊನ್ನಂಪೇಟೆ